**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 31/2026**

**ಸಿ.ಡಬ್ಲ್ಯೂಃ 2**
**ಪಿ.ಡಬ್ಲೂಃ** 2

**ಸಾಕ್ಷಿದಾರರ ಹೆಸರು ಃ ರವಿರಾಜ್**
**ತಂದೆಯ ಹೆಸರು ಃ ಕೆ ಕೆ ಶ್ರೀಧರ್**
**ವಯಸ್ಸು ಃ 39 ವರ್ಷ**
**ಉದ್ಯೋಗ ಃ ಕೃಷಿ**
**ವಾಸಸ್ಥಳ ಃ ಕಣಿವೆ ಗ್ರಾಮ, ನ ರಾ ಪುರ ತಾಲ್ಲೂಕು.**

**ದಿನಾಂಕಃ 9.6.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ತಿಳಿದಿರುವುದಿಲ್ಲ. ಸುಮಾರು 8 ವರ್ಷಗಳ ಹಿಂದೆ ಪೊಲೀಸರು ಒಂದು ದಾಖಲೆಗೆ ಸಹಿ ಮಾಡುವಂತೆ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ.ಅದೇ ಸಂದರ್ಭದಲ್ಲಿ ಪೊಲೀಸರು ಒಂದು ಭಾವಚಿತ್ರವನ್ನು ತೆಗೆದುಕೊಂಡರು, ಸದರಿ ಭಾವಚಿತ್ರವನ್ನು ಏಕೆ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ ಅದರಲ್ಲಿರುವ ವಿಚಾರಗಳು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. (ಸದರಿ ನಿಪಿ-2 ರಲ್ಲಿರುವ ಮೂಲ ಮಹಜರ್ ಸಿಸಿ.ನಂಃ 63/2018 ರಲ್ಲಿ ನಿಪಿ-2 ಆಗಿ ಗುರುತಿಸಲಾಗಿರುತ್ತದೆ ಮತ್ತು ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಗಿರುತ್ತದೆ.) ಸಾಕ್ಷಿಯು ಒಂದು ಭಾವಚಿತ್ರದ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**ಃಃಪಾಟೀ ಸವಾಲುಃ ಮಾನ್ಯ ಎಪಿಪಿಯವರಿಂದಃಃ**

ದಿನಾಂಕಃ 16.2.2017 ರಂದು ಚಾಸಾ-19 ರವರು ನನ್ನನ್ನು ಮತ್ತು ಚಾಸಾ-3 ರವರನ್ನು ಬರಮಾಡಿಕೊಂಡು ಈ ಪ್ರಕರಣದ ಬಗ್ಗೆ ಮಾಹಿತಿಯನ್ನು ತಿಳಿಸಿ ಕೃತ್ಯ ನಡೆದ ಸ್ಥಳದ ಮಹಜರಿಗೆ ಪಂಚ ಸಾಕ್ಷಿದಾರರಾಗಿ ಸಹಕರಿಸುವಂತೆ ನೋಟೀಸು ನೀಡಿರುತ್ತಾರೆಂದರೆ ಸರಿಯಲ್ಲ. ಅದೇ ದಿನ ಆರೋಪಿತರು ಕೆಎ-20-ಡಿ-5378 ವಾಹನದಲ್ಲಿ ಕಳ್ಳತನವಾಗಿರುವ 10 ಚೀಲ ಒಣ ಅಡಿಕೆ ಮತ್ತು ಒಂದುವರೆ ಚೀಲ ಕಾಳುಮೆಣಸು ವಿಚಾರವನ್ನು ತಿಳಿಸಿ ಸದರಿ ಕಳ್ಳತನವಾದ ಮನೆಯ ಗೋಡನ್ ಜಾಗವನ್ನು ಚಾಸಾ-1 ರವರು ತೋರಿಸಿದಂತೆ ನಮ್ಮಗಳ ಸಮಕ್ಷಮ ನಿಪಿ-2 ರಂತೆ ಮಹಜರನ್ನು ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ಸ್ಥಳದಲ್ಲಿಯೇ ಬರೆದುಕೊಂಡು ನಮ್ಮ ಸಹಿಪಡೆದುಕೊಂಡರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಒಂದು ಭಾವಚಿತ್ರವನ್ನು ನಿಪಿ-3 ರಂತೆ ತೆಗೆದುಕೊಂಡರು ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಪಾಟೀ ಸವಾಲು ಆರೋಪಿ ಪರ ಶ್ರೀ. ಎಂ ಸಿ ವಕೀಲರಿಂದಃಃಇಲ್ಲಾಃಃ**

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-**
**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**